ರೂಲ್ಸ್ ಇವೆ. ಆ ರೂಲ್ಸ್ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅಂಥದೇನಾದರೂ ಯಾವುದಾದರೂ ಸಂದರ್ಭದಲ್ಲಿ ಕ್ರಮ ತೆಗೆದುಕೊಳ್ಳದೆ ಇದ್ದರೆ, ಜಿಲ್ಲಾಧಿಕಾರಿಗಳಿಗೆ ತಿಳಿಸಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಗೊತ್ತು ಮಾಡುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ.—ತಾಲ್ಲೂಕಿನಲ್ಲಿ ಭೂ ಹೀನರು ಅಕ್ರಮವಾಗಿ 8-10 ವರ್ಷದಿಂದ ಸಾಗುವಳಿ ಮಾಡುತ್ತಿದ್ದು, ತೆಂಗಿನತೋಟ, ಅಡಕೆ ತೋಟ ಮಾಡಿದ್ದರೆ ಅವರನ್ನು ಸಹಿತ ಅದರಿಂದ ಹೊರಕ್ಕೆ ಹಾಕಲಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆರೆ ಅಂಗಳಕ್ಕೂ ಅದಕ್ಕೂ ಸಂಬಂಧವಿಲ್ಲ,

ಶ್ರೀ ಕೆ. ಎಚ್. ಹನುಮೇಗೌಡ.—ಕೆರೆ ತುಂಬದ ಮೇಲೆ ನೀರು ಇಲ್ಲದೆ ಇರತಕ್ಕ ಕೆರೆ ಅಂಗಳ ಹತ್ತಾರು ಎಕರೆ ಇದೆ. ಅಂಥ ಪ್ರದೇಶವನ್ನು ವ್ಯವಸಾಯಕ್ಕೆ ಕೊಡುವುದಕ್ಕೆ ಆರೋಜನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕೆರೆ ಅಂಗಳ ಎಂದು ಒಂದು ಸಾರಿ ಗೊತ್ತಾದ ಮೇಲೆ ಅದನ್ನು ಯಾವ ಕಾರಣಕ್ಕೇ ಆದರೂ ಕೊಡುವುದು ಸೂಕ್ತವಲ್ಲ ಎನ್ನುವುದು ಸರ್ಕಾರದ ಅಭಿಪ್ರಾಯ.

ಶ್ರೀ ಎಂ. ಬಿ. ರಾಮಸ್ವಾಮಿ.—ಅನೇಕ ಶಾಸಕರು ಕೆರೆ ಅಂಗಳವನ್ನು ಒತ್ತುವರಿ ಮಾಡಿಕೊಂಡು ಪಂಪ್‌ಸೆಟ್‌ಗಳನ್ನು ಹಾಕಿಕೊಂಡಿರುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಅಂಥ ವಿಷಯಗಳನ್ನು ತಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಶಾಸಕ ಸಭಾ ಸದಸ್ಯರಾಗಿರತಕ್ಕವರಾಗಲೀ, ಹಿಂದೆ ಇದ್ದವರಾಗಲೀ, ಅದರ ಆಧಾರದ ಮೇರೆ ಒಬ್ಬರಿಗೊಬ್ಬರಿಗೆ ತಾರತಮ್ಯ ಮಾಡುವ ಹಾಗೆಯೇ ಇಲ್ಲ. ನಿರ್ದಿಷ್ಟವಾದ ಕೆಲವು ನಿಯಮಗಳನ್ನು ಮಾಡಿದ್ದೇವೆ. ಆ ನಿಯಮಗಳಿಗೆ ವಿರೋಧವಾಗಿ ಭೂಮಿಯನ್ನು ಅಕ್ರಮಿಸಿಕೊಂಡಿರತಕ್ಕವರ ಮೇರೆ, ಎಲ್ಲರಿಗೂ ಒಂದೇ ವಿಧವಾಗಿ ಅನ್ವಯವಾಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

Appointment of Receptionists in Taluk Offices

57. Sri GATTI CHANDRASEKHAR (Gubbi).—

Will the Minister for Revenue be pleased to state:—

whether it is under the consideration of the Government to appoint receptionist in Taluk Offices also as is done in many offices and factories, so as to assist the innocent Ryots in getting their work done ?

Sri N. HUTCHAMASTHY GOWDA (Minitser for Revenue).—

No.

ಶ್ರೀ ಗಟ್ಟಿ ಚಂದ್ರಶೇಖರ್.—ತಾಲ್ಲೂಕು ಆಫೀಸುಗಳಲ್ಲಿ ಒಬ್ಬ ರೈತ ಬಂದರೆ ಅವನು ಎಲ್ಲಿಗೆ ಹೋಗಬೇಕು, ಎಲ್ಲಿ ಅವನು ಕೆಲಸವಾಗಬಹುದು ಎನ್ನುವುದು ಗೊತ್ತಾಗುವುದಿಲ್ಲ. ತಹಸೀಲ್ದಾರರ ಕಚೇರಿಯಲ್ಲಿ ಡವಾಲ ತಹಸೀಲ್ದಾರರ ಮರ್ಜಿಯನ್ನು ಅನುಸರಿಸಿ ದಿವಸ ಗಟ್ಟಲೆ ಕಾಯಬೇಕು ಆಥವಾ ಸ್ವಲ್ಪೀಯ ಪುಡಾರಿಗಳನ್ನು ಕರೆದುಕೊಂಡು ದುಡ್ಡುಕಾಸು ಕೊಟ್ಟು ಕೆಲಸ ಮಾಡಿಸಿಕೊಂಡು ಬರಬೇಕಾದರೆ ತೊಂದರೆಯಾಗುತ್ತದೆ. ಬೆಂಗಳೂರಿನಂಥ ದೊಡ್ಡ ದೊಡ್ಡ ನಗರಗಳಲ್ಲಿ ಕಾರ್ಖಾನೆಗಳಲ್ಲಿ ಮತ್ತು ಮುಖ್ಯವಾದ ಆಫೀಸುಗಳಲ್ಲಿ ಸ್ವಾಗತಕಾರರಿರುತ್ತಾರೆ. ಯಾರಾದರೂ ಬಂದ ತಕ್ಷಣ ಅವರ ಕೆಲಸವೇನು ಎಂದು ವಿಚಾರಿಸಿ ಬಹಳ ಜಾಗ್ರತೆಯಾಗಿ ಇನ್ನೊಬ್ಬರು ಬರುವುದರೊಳಗಾಗಿ ಅವರನ್ನು ಮುಂದಕ್ಕೆ ಕಳುಹಿಸುತ್ತಾರೆ. ಆದೇ ರೀತಿ ತಾಲ್ಲೂಕು ಆಫೀಸುಗಳಲ್ಲಿ ಕೂಡ ಒಬ್ಬ ಸ್ವಾಗತಕಾರನನ್ನು ಹಾಕುವ ವ್ಯವಸ್ಥೆಯನ್ನು ಮಾಡಿದರೆ ನಿಜವಾಗಿ ನಾವು ಗಬರೀ ಹೆಣಾವೊ ಮಾಡುವುದಕ್ಕೆ ಸಾಧ್ಯವಾಗುತ್ತದೆಯಾದ್ದರಿಂದ ಇದನ್ನು ಕಾರ್ಯಗತ ಮಾಡಿಕೊಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕೈಗಾರಿಕೆಗಳಲ್ಲಿ ಈ ವಿಧವಾದ ಏರ್ಪಾಡು ಇರ ಬಹುದು. ಆದರೆ ಸರ್ಕಾರಿ ಕಚೇರಿಗಳಲ್ಲಿ ಇದರ ಅವಶ್ಯಕತೆ ಇಲ್ಲ ಎನ್ನುವುದು ಸರ್ಕಾರಕ್ಕೆ ಇರ ತಕ್ಕ ಅಭಿಪ್ರಾಯ. ಶಾಸನಸಭಾ ಸದಸ್ಯರುಗಳು ಮತ್ತು ಅನೇಕ ಜನ ಸಾರ್ವಜನಿಕರು ಏನೂ ತಿಳಿಯದ ಇರುವವರಿಗೆ ಸಹಾಯಕರಾಗಿದ್ದಾರೆ. ತಾಲ್ಲೂಕು ಕಚೇರಿಗಳಲ್ಲಿರತಕ್ಕ ಶಿರಸ್ತೇದಾರರು ಮಗೈರೆ ಅಧಿಕಾರಿಗಳು ಈ ಕೆಲಸ ಮಾಡುವುದಕ್ಕೆ ಸಹಾಯ ಮಾಡುತ್ತಾರೆ. ಆದ್ದರಿಂದ ಪ್ರತ್ಯೇಕ ವಾಗಿ ಒಬ್ಬರನ್ನು ನೇಮಕ ಮಾಡತಕ್ಕ ಅಗತ್ಯವಿಲ್ಲ.

Schools in Muddebihal Taluk

69. **Sri M. M. SAJJAN** (Muddebihal).—

Will the Minister for Education be pleased state:—

(*a*) the villages having no schools and no school buildings in Muddebihal taluk;

(*b*) the reason why the Government has not provided both schools and school buildings in such villages;

(*c*) whether these villages are in a position to raise popular contribution to construct the school buildings?

Sri A. R. BADARINARAYANA (Minister for Education).—

(*a*) Every village has a school. However, there are 42 villages having no Government school buildings.

(*b*) Schools have been provided as already indicated above.

Taluk Development Board has proposed to take up construction of school buildings in 20 villages during 1972-73 and in the remaining 22 villages during 1973-74 and 1974-75.

(*c*) So far the villages have not come forward with public contribution.

ಶ್ರೀ ಎಂ. ಎಂ. ಸಜ್ಜನ್.—ಯಾವ ಯಾವ ಗ್ರಾಮಗಳಲ್ಲಿ ಶಾಲೆಗಳಿಲ್ಲ? ಇವುಗಳ ವಿವರ ಗಳನ್ನು ಕೊಡಲಾಗುವುದೇ?

† ಶ್ರೀ ಎ. ಆರ್. ಬದರಿನಾರಾಯಣ್.—ಎಲ್ಲ ಗ್ರಾಮಗಳಲ್ಲೂ ಶಾಲೆಗಳಿವೆ. ಶಾಲೆಗಳಿ ಲ್ಲದೇ ಇರುವ ಗ್ರಾಮಗಳು ಯಾವುವೂ ಇಲ್ಲ.

ಶ್ರೀ ಎಂ. ಎಂ. ಸಜ್ಜನ್.—ಯಾವ ಯಾವ ಗ್ರಾಮಗಳಲ್ಲಿ ಶಾಲೆಗಳಿಗೆ ಕಟ್ಟಡಗಳು ಇಲ್ಲ ಎನ್ನು ವುದರ ವಿವರಗಳನ್ನು ನಾನು ಕೇಳುತ್ತಿರುವುದು.

ಶ್ರೀ ಎ. ಆರ್. ಬದರಿನಾರಾಯಣ್.—42 ಗ್ರಾಮಗಳಲ್ಲಿ ಶಾಲಾ ಕಟ್ಟಡಗಳಿಲ್ಲ. ಆದರೆ ಯಾವ ಊರುಗಳು ಎನ್ನುವುದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಇದರ ವಿವರಗಳನ್ನು ಒದಗಿಸಿಕೊಡ ಲಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಅವರ ಪಂತಿಗೆಯನ್ನು ಕೊಟ್ಟರೆ ಸರಕಾರ ಅವರ ಪಾಲಿನ ಹಣ ಕೊಟ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಿಕೊಡಬೇಕೆಂದು ನಿಯಮ ಇದೆ. ಇದರಂತೆ ಎಲ್ಲ ಊರುಗಳಲ್ಲೂ ಶಾಲಾ ಕಟ್ಟಡಗಳನ್ನು ಸರಕಾರ ಕಟ್ಟಿಸಿ ಮಂಗಿಸಿದ್ದಾರೆಯೇ?